**ದಿನಾಂಕಃ13-02-2025** ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ನಾನು ಬಳೆ ವ್ಯಾಪಾರ ಮಾಡಿಕೊಂಡು ಇರುತ್ತೇನೆ. ತಿಂಗಳಿಗೆ ಸುಮಾರು 3 ಸಾವಿರ ಆದಾಯ ಇರುತ್ತದೆ. ಆರೋಪಿಯು ಸುಮಾರು 7 ವರ್ಷಗಳಿಂದ ಧರ್ಮಸ್ಥಳ ಸಂಘದ ಮೂಲಕ ಪರಿಚಯ ಇರುತ್ತಾರೆ. ನಾವಿಬ್ಬರೂ ಒಂದೇ ಸಂಘದ ಸದಸ್ಯರಾಗಿರುತ್ತೇವೆ. ಸದರಿ ಸಂಘವು ಸಾಲ ಪಡೆಯುವ ಕುರಿತು ಮಾಡಿಕೊಳ್ಳಲಾಗಿರುತ್ತದೆ. ಸಾಲ ಪಡೆದ ನಂತರ ಸಾಲ ಮರುಪಾವತಿ ಮಾಡಬೇಕು ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ 4 ವರ್ಷಗಳ ಹಿಂದೆ ಆರೋಪಿಯು ನನನ್ನು ಭೇಟಿಯಾಗಿರುತ್ತಾಳೆ. ಮೊದಲ ಬಾರಿ 40 ಸಾವಿರ ಸಾಲ ಕೇಳಿರುತ್ತಾಳೆ. ನಂತರ ಹಲವು ಬಾರಿ ಸಾಲ ಪಡೆದಿರುತ್ತಾಳೆ. ಆದರೇ ಯಾವಾಗ ಪಡೆದಿರುತ್ತಾಳೆ ಎಂದು ನೆನಪಿಲ್ಲ.

2. ದಿಃ 18-02-2022 ಕ್ಕೆ 5 ಲಕ್ಷ ರೂ. ಸಾಲ, ನಂತರ ಮಾರ್ಚ್ 2022 ರಲ್ಲಿ 1,50,000/- ಸಾಲ ಪಡೆದಿರುತ್ತಾಳೆ. ಸದರಿ ಸಾಲದ 5 ಲಕ್ಷ ರೂ. ಹಣವು ನನಗೆ ಎಲ್ ಐ ಸಿ ಮೂಲಕ ಬಂದಿರುತ್ತದೆ. ಎಲ್ ಐ ಸಿ ಹಣವು 2021 ರಲ್ಲಿ 6 ಲಕ್ಷ ರೂ. ಬಂದಿರುತ್ತದೆ. ನನ್ನ ಬಳಿ ಈ ಮೇಲೆ ಹೇಳಿದಂತೆ ಆರುವರೇ ಲಕ್ಷ ರೂ. ಹಣ ನನ್ನ ಬಳಿ ಇರಲಿಲ್ಲ ಎಂದರೆ ಸರಿಯಲ್ಲ. ಈ ಹಣವನ್ನು ಹೊರತು ಪಡಿಸಿ ಆರೋಪಿಗೆ ಮತ್ತೊಂಮ್ಮೆ 5,50,000/- ಹಣ ನೀಡಿದ್ದು, ದಿನಾಂಕ ನೆನಪಿಲ್ಲ, ಆದರೇ ಈ ಪ್ರಕರಣದ ಸಾಲ ದಿನಾಂಕದ 3 ತಿಂಗಳ ಪೂರ್ವದಲ್ಲಿ ನೀಡಿರುತ್ತೇನೆ. ಸದರಿ ಹಣವನ್ನು ನನ್ನ ಬ್ಯಾಂಕ್ ನಿಂದ ತೆಗೆದು ಆರೋಪಿಗೆ ನೀಡಿರುತ್ತೇನೆ. ಆರೀತಿ ನಾನು ಯಾವುದೇ ಸಾಲ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

3. ಧರ್ಮಸ್ಥಳ ಸಂಘದಲ್ಲಿ ನಾನು ಹಣವನ್ನು ಕಲೆಕ್ಟ ಮಾಡುತ್ತೇನೆ ಎಂದರೆ ಸಾಕ್ಷಿಯು ಪ್ರತಿವಾರ ಒಬ್ಬ ಸದಸ್ಯರು ಕಲೆಕ್ಟ ಮಾಡುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸಂಘದಲ್ಲಿ ಸಾಲದ ಭದ್ರತೆಗೆ ಚಕ್ ಗಳನ್ನು ಪಡೆಯುತ್ತಾರೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಸಂಘದ ಮೂಲಕ 50 ಸಾವಿರ ಸಾಲ ನೀಡಿ ಎರಡು ಚಕ್ ಗಳನ್ನು ಭದ್ರತೆಗೆ ಪಡೆದಿದ್ದೇನು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಭದ್ರತೆಗೆ ಎರಡು ಚಕ್ ಗಳನ್ನು ನೀಡಿದ್ದರು ಎಂದು ನುಡಿಯುತ್ತಾರೆ. ಸದರಿ ಭದ್ರತೆಗೆ ನೀಡಿದ ಚಕ್ ಗಳನ್ನು ನಾನು ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

4. ನನ್ನ ಮತ್ತು ಆರೋಪಿಯ ನಡುವಿನ ಸಾಲಕ್ಕೆ ಸಂಬಂಧಿಸಿದಂತೆ ಬಾಂಡ್ ಬರೆಸಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಅರೀತಿ ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಬಾಂಡ್ ನ ಮೂಲ ಪ್ರತಿ ನನ್ನ ಬಳಿ ಇರುತ್ತದೆ. ನನ್ನ ಬಳಿ ಸಾಲ ನೀಡುವ ಸಮಯದಲ್ಲಿ ಹಣ ಇದ್ದ ಬಗ್ಗೆ ನನ್ನ ಬ್ಯಾಂಕ್ ಪಾಸ್ ಪುಸ್ತಕದಲ್ಲಿ ನಮೂದಾಗಿರುತ್ತದೆ.

5. ನಿಪಿ-1 ರ ಬರವಣಿಗೆಯನ್ನು ರಾಜೂರು ವಕೀಲರು ಮಾಡಿರುತ್ತಾರೆ. ನಿಪಿ-1 ರ ಬರವಣಿಗೆ ಮತ್ತು ಸಹಿ ಶಾಹಿಗಳು ಬೇರೆ ಬೇರೆಯಾಗಿರುತ್ತವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆರೋಪಿಯು ಖಾಲಿ ಚಕ್ ಗೆ ಸಹಿ ಮಾಡಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಯು ಅಷ್ಟು ಹಣ ನೀಡಲು ಬಾಧ್ಯಸ್ಥಳಲ್ಲದಿದ್ದರೂ ಸಹ ನಾನೇ ಸುಳ್ಳು ಹಣವನ್ನು ಬರೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿಯ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ನಾನು ಹೇಳಿದಂತೆ ಯಾವುದೇ ವ್ಯವಹಾರ ಅಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನಿಪಿ 1 ರ ಹಣ ನೀಡಲು ಬಾಧ್ಯಸ್ಥಳಲ್ಲ ಎಂದರೆ ಸರಿಯಲ್ಲ. ನನ್ನ ಪರ ಈ ಪ್ರರಕಣದಲ್ಲಿ ಸಾಕ್ಷಿ ಮಾಡಿಸಲು ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಷಯಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ**

**ಹೆ. ಜೆ ಎಂ ಎಫ್ ಸಿ ಕೊಪ್ಪಳ.**